# ಕತ್ತಲ ದಾರಿಯಲ್ಲಿ ಕುರುಹುಗಳೇ ಕಣ್ಣುಗಳಾಗಿ...

‘ಡಾಕ್ಟರೇ, ಗೊತ್ತಲ್ವ... ನಮಗೆ ಬೇಕಾಗಿರೋದು, ಸಾವಿನ ಕಾರಣ, ಸಾವಿನ ರೀತಿ, ಸಾವಿನ ಸಮಯ, ಎನಿ ಸೆಕ್ಸುಯಲ್ ಅಸಾಲ್ಟ್ ಮತ್ತು ಕೊನೆಯದಾಗಿ, ಶವ ಮತ್ತು ಶವದ ಮೇಲಿನ ಬಟ್ಟೆಯ ಮೇಲೆ ಇರಬಹುದಾದ ಅಪರಾಧಿಗೆ ಸಂಬಂಧಿಸಿದ ಕಲೆ ಕುರುಹುಗಳು, ಅಷ್ಟೇ’.

‘ಡೋಂಟ್ ವರಿ ಮಾಯಣ್ಣ, ಐ ಹ್ಯಾವ್ ಬೀನ್ ಲಾಂಗ್ ಎನಫ್ ಇನ್ ದಿಸ್ ಫೀಲ್ಡ್ ಟು ನೋ ವಾಟ್ ಎನ್ ಇನ್ವೆಸ್ಟಿಗೇಟಿಂಗ್ ಆಫೀಸರ್ ನೀಡ್ಸ್ ಇನ್ ಮರ್ಡರ್ ಕೇಸಸ್... ಆದರೆ, ರಿಪೋರ್ಟ್ ಕೊಡೋದಕ್ಕೆ ನೀವು ನನಗೆ ಒಂದು ದಿನ ಸಮಯ ಕೊಡಬೇಕು... ಗೊತ್ತಲ್ವಾ ನಿಮಗೆ – ಅಟಾಪ್ಸಿ, ಇಂಟರ್ನಲ್ ಟೆಸ್ಟ್‌ಗಳು, ಎಕ್ಸ್‌ಟರ್ನಲ್ ಟೆಸ್ಟ್‌ಗಳು ಇತ್ಯಾದಿ ಎಲ್ಲಾ.’

‘ಓಕೆ ಡಾಕ್ಟರ್.’

ಡಾಕ್ಟರ್ ವಿದಾಯ ಹೇಳಿ ಆಂಬ್ಯುಲೆನ್ಸ್‌ನೊಡನೆ ತೆರಳಿದ ಮೇಲೆ ಮಾಯಣ್ಣ, ಅಮ್ಮುವಿನ ಮನೆಗೆ ಬೀಗ ಜಡಿದು, ಸೀಲ್ ಮಾಡಿ, ಪೀಸಿ ಕುಂಬಯ್ಯನನ್ನು ಕಾಯಲು ನಿಲ್ಲಿಸಿ, ಮನೆ ಮಾಲೀಕರಿಗೆ ಒಂದಷ್ಟು ಸೂಚನೆಗಳನ್ನು ನೀಡಿ, ಮಿಕ್ಕೆಲ್ಲಾ ಸಿಬ್ಬಂದಿಗಳೊಂದಿಗೆ ವಾಪಸ್ ಪೊಲೀಸು ಸ್ಟೇಷನ್ನಿಗೆ ಹೊರಟ. ಎಲ್ಲರೂ ಸ್ಟೇಷನ್ ತಲುಪುವಷ್ಟರಲ್ಲಿ ಟೈಮ್ ಆಗಲೇ ಸಂಜೆ ಏಳಾಗಿತ್ತು.

‘ವಿನಯ್ ಎಲ್ಲರಿಗೂ ಇಲ್ಲಿಗೇ ಊಟ ತರಿಸಿ. ಈಗ ಈ ಕೇಸಿನ ಬಗ್ಗೆ ಸ್ವಲ್ಪ ಚರ್ಚೆ ಮಾಡೋದಿದೆ.’

‘ಯೆಸ್ ಸಾರ್.’

ಮಾಯಣ್ಣನ ಮೇಜಿನ ಮುಂದೆ ಆರೂ ಜನ ಪೀಸಿಗಳು ಸಾಲಾಗಿ, ಶಿಸ್ತಾಗಿ, ಹಿಂದೆ ಕೈಕಟ್ಟಿ ನಿಂತರು.

‘ಈ ಅಮ್ಮು ಅವರ ಮರ್ಡರ್ ಒಂದು ಹೈ ಪ್ರೊಫೈಲ್ ಕೇಸ್... ಸಾರ್ವಜನಿಕರ, ಸುದ್ದಿ ಮಾಧ್ಯಮದವರ ಮತ್ತು ನಮ್ಮ ಇಲಾಖೆಯ ಪೂರ್ತಿ ಗಮನ ಈ ಕೇಸಿನ ಮೇಲೇ ಇದ್ದು, ನಮ್ಮ ಮೇಲೆ ತುಂಬಾ ಒತ್ತಡ ಬೀಳುತ್ತೆ. ನಮ್ಮ ಮತ್ತು ನಮ್ಮ ಸ್ಟೇಷನ್ನಿನ ದಕ್ಷತೆಯ ಮೌಲ್ಯಮಾಪನ ಬಹುಶಃ ಈ ಕೇಸ್ ಮೇಲೆ ಆಗುತ್ತೆ... ಈ ಕೇಸಿನ ಐ ಓ, ಅಂದರೆ ಇನ್ವೆಸ್ಟಿಗೇಷನ್ ಆಫೀಸರ್ ಆಗಿ ಇದನ್ನ ಹೇಗೆ ಮುಂದುವರಿಸಬೇಕು ಅನ್ನೋ ಜವಾಬ್ದಾರಿ ನನ್ನ ಮೇಲಿದೆ. ಹೇಗೆ ಮುಂದುವರೀಬೇಕು ಅನ್ನೋದು ತಿಳಿಬೇಕಾದರೆ, ಮೊದಲಿಗೆ ನಾವು ಎಲ್ಲಿದ್ದೀವಿ, ಎರಡನೆಯದಾಗಿ ಎಲ್ಲಿ ಮುಟ್ಟಬೇಕು, ಮೂರನೆಯದಾಗಿ ಇವೆರಡರ ನಡುವಿನ ಸರಿಯಾದ ದಾರಿ ಯಾವುದು ಅಂತ ತಿಳಿಬೇಕು... ಎಲ್ಲರಿಗೂ ಅರ್ಥ ಆಯ್ತಾ?’

ಎಲ್ಲರೂ ಒಕ್ಕೊರಲಿನಿಂದ– ‘ಯೆಸ್ ಸಾರ್.’

‘ಓಕೆ, ಹಾಗಾದರೆ ಮೊದಲನೇ ಹಂತ, ಈಗ ಎಲ್ಲಿದ್ದೀವಿ ಅನ್ನೋದು... ವಿನಯ್, ಸಂಬಂಧಪಟ್ಟ ಎಲ್ಲರ, ಎಲ್ಲಾ ಕಾಂಟಾಕ್ಟ್ ಡೀಟೈಲ್ಸ್ ಕಲೆಕ್ಟ್ ಮಾಡಿದ್ದೀರ?’

‘ಇಲ್ಲೇ ನಿಮ್ಮ ಟೇಬಲ್ ಮೇಲೆ ಇಟ್ಟಿದ್ದೀನಿ ನೋಡಿ ಸಾರ್.’

‘ಅಮ್ಮು ಮನೆ ಕೆಲಸದಾಕೆ ಕಮಲಮ್ಮನ ಗಂಡ ಜಯರಾಮು, ಮತ್ತೆ ಆನಂದ ಆಸ್ಪತ್ರೆಯ, ವಿಷಯಾನ ವಿಚಾರ್ಸೋದಿಕ್ಕೇ ಹೇಳಿದ್ದೆ. ಹೇಳಿ ಏನಾಯ್ತು?’

‘ಸಾರ್, ಜಯರಾಮನಿಗೆ ಕೊರೊನಾ ಅಟ್ಯಾಕ್ ಆ ಗಿ ರೋ ದು ನಿಜ, ಇಡೀ ಒಂದು ವಾರ ಹಾಸಿಗೆ ಮೇಲೇ ಇದ್ದನಂತೆ. ಮೂರು ದಿನದಿಂದ ಕರೆನ್ಸಿ ಇಲ್ಲದೆ ಅವನ ಫೋನ್ ಡೆಡ್ ಆಗಿದೆ. ಅವನನ್ನ ನೋಡೋದಕ್ಕೂ ಯಾರೂ ಬಂದಿರಲಿಲ್ಲ. ಇದನ್ನ ಅಲ್ಲಿನ ನರ್ಸುಗಳು, ವಾರ್ಡ್ ಬಾಯ್ಸ್ ಮತ್ತು ಡಾಕ್ಟರ್ಸ್ ಎಲ್ಲಾ ಕನ್ಫರ್ಮ್ ಮಾಡಿದ್ದಾರೆ.’

‘ಓಕೆ, ಅವನನ್ನ ಇದರಿಂದ ಹೊರಗೆ ಇಡಬಹುದೇನೊ. ಅಲ್ಲದೆ ಇಟ್ ಡಸ್ ನಾಟ್ ಲುಕ್ ಲೈಕ್ ಮರ್ಡರ್ ಫಾರ್ ಗೇಯ್ನ್.’

‘ಹೌದು ಸಾರ್, ಅಮ್ಮು ಅವರ ಮನೇಲಿ ಏನೂ ಕಳವು ಆದಂಗಿಲ್ಲ ಅಂದಮೇಲೆ ಬೇರೇನೆ ಏನೋ ಕಾರಣ ಇರಬೇಕು ಸಾರ್.’

‘ನೀವೇಳೋದು ಸರಿ ಇರಬಹುದು ಕಾಟಯ್ಯ.’

ವಿನಯ್‌ನ ಕುರಿತು–

‘ವಿನಯ್, ನಿಮಗೆ ಟೈಮ್ ಲೈನ್ ರೆಡಿ ಮಾಡಿ ಅಂದಿದ್ನಲ್ಲ...’

